**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**
**ಸಿ.ಸಿ ನಂ.5791/2025**

ಪಿರ್ಯಾದಿದಾರರುಃ ವಿರುದ್ಧ ಆರೋಪಿ

| ಪಿರ್ಯಾದಿದಾರರು | ಆರೋಪಿ |
| --- | --- |
| ಸರಕಾರದ ಪರವಾಗಿ ಅಬಕಾರಿ ಇನ್ಸ್ಪೆಕ್ಟರ್ ಹರಿಹರ ವಲಯ. | ನೀಲಪ್ಪ ಯಾನೇ ನೀಲಪ್ಪ ಅರಳಿಕಟ್ಟೆ ತಂದೆ ಗುಡ್ಡಪ್ಪ, 45 ವರ್ಷ, ಕೂಲಿ, ವಾಸಃ ಜೈ ಭೀಮ ನಗರ, ಹರಿಹರ ಸಿಟಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. |

ದಂಡ ಪ್ರಕ್ರಿಯಾ ಕಲಂ **313** ರ ಅಡಿ ಆರೋಪಿತರ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆಃ 2 ಫ್ರಾಸಾ.1 ಶ್ರೀಮತಿ ರೇಖಾ ಎಸ್.ಹೆಚ್. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 31.05.2025 ರಂದು ತಾನು ಹಾಗೂ ಸಿಬ್ಬಂದಿಗಳಾದ ಚಾಸಾ.2 ಮತ್ತು 3 ರವರಂದಗ ಹರಿಹರ ನಗರದ ಜೈಭೀಮ ನಗರದಲ್ಲಿ ಗಸ್ತು ಮಾಡುತ್ತಿರುವಾಗ ನೀಲಪ್ಪ ಅರಳೀಕಟ್ಟೆ ಎನ್ನುವವನು ತನ್ನ ಮನೆಗೆ ಹೊಂದಿಕೊಂಡು ಇರುವ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಮಾಹಿತಿ ಬಂದಿದ್ದು ಪಂಚನಾಮೆಯನ್ನು ಜರುಗಿಸಲು ಪಂಚರನ್ನು ಹುಡುಕಲಾಗಿ ಅಲ್ಲಿಯೇ ಸ್ಥಳದಲ್ಲಿ ಸ್ಥಳೀಯರನ್ನು ಕರೆದು, ಬಾತ್ಮಿಯನ್ನು ತಿಳಿಸಿ ದಾಳಿಯ ಸಮಯದಲ್ಲಿ ಜೊತೆ ಇದ್ದು ಪಂಚನಾಮೆಯನ್ನು ಜರುಗಿಸಲು ಕೇಳಿಕೊಂಡಿದ್ದರಿಂದ ಸ್ಥಳೀಯರು ಒಪ್ಪಿರುವುದಿಲ್ಲ ಹಾಗಾಗಿ ಇಲಾಖೆ ಸಿಬ್ಬಂದಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಮಾಹಿತಿ ಇದ್ದ ಸ್ಥಳಕ್ಕೆ ಹೋದಾಗ ಕಿರಾಣಿ ಅಂಗಡಿಯ ಮುಂಭಾಗದಲ್ಲಿ ವ್ಯಕ್ತಿಯೊಬ್ಬ ನಿಂತಿದ್ದು ಆತನನ್ನು ಕರೆದು ಹೆಸರು ವಿಳಾಸ ಕೇಳಲಾಗಿ ಆ ವ್ಯಕ್ತಿಯು ನೀಲಪ್ಪ ಅರಳೀಕಟ್ಟೆ ತಂದೆ ಗುಡ್ಡಪ್ಪ ಎಂದು ತಿಳಿಸಿದ್ದು, ಬಂದ ಬಾತ್ಮಿಯನ್ನು ಅವನಿಗೆ ಹೇಳಿ ಸದರಿ ಅಂಗಡಿಯನ್ನು ಶೋಧಿಸಲು ಮಾನ್ಯ ನ್ಯಾಯಾಲಯದಿಂದ ಶೋದನಾ ವಾರಂಟನ್ನು ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದ ಕಾರಣ ಶೋಧನಾ ಸಮುಚಿತ ಆದಾರವನ್ನು ಸ್ಥಳದಲ್ಲಿ ತಯಾರಿಸಿಕೊಂಡು ಪಂಚರು ಹಾಗೂ ಆರೋಪಿಗಳ ಸಹಿ ಪಡೆದುಕೊಂಡು ಕಿರಾಣಿ ಅಂಗಡಿಯನ್ನು ಶೋಧಿಸಲಾಗಿ ಆ ಅಂಗಡಿಯ ಪ್ರವೇಶ ದ್ವಾರವು ದಕ್ಷಿಣಾಭಿಮುಖವಾಗಿದ್ದು ಪ್ರವೇಶ ದ್ವಾರದ ಪಕ್ಕದ ಗಲ್ಲಾಪೆಟ್ಟಿಗೆಯ ಟೇಬಲ್ ನ ಕೆಳಗೆ ಸ್ಟಾರ್ ಪಾನ್ ಮಸಾಲಾ ಚೀಲದಲ್ಲಿ 90 ಮಿಲಿಯ ಒರಿಜನಲ್ ಚಾಯ್ಸ್ ವಿಸ್ಕಿಯ 25 ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ಗಳು ಹಾಗೂ 90 ಮಿಲಿಯ ಹೈವಾಟ್ಸ್ ವಿಸ್ಕಿಯ 25 ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ಇದ್ದು ಒಟ್ಟು 50 ಟೆಟ್ರಾ ಪ್ಯಾಕೆಟಗಳು ಇದ್ದು ಒಟ್ಟು 4.500

ಲೀ ಮದ್ಯ ಇದ್ದು ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಅವುಗಳ ಮೇಲೆ ಯಾವುದೇ ಭದ್ರತಾ ಇರುವುದು ಕಂಡು ಬಂದಿರುವುದಿಲ್ಲ. ಆರೋಪಿತನಿಗೆ ಮದ್ಯ ಮಾರಾಟ ಮಾಡಲು ಪರವಾನಿಗೆ ಇದೆ. ಎಂದು ಕೇಳಲಾಗಿ ಆತನು ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ. ಸದರಿ ಮುದ್ದೆ ಮಾಲುಗಳಿಂದ ರಾಸಾಯನಿಕ ಪರೀಕ್ಷೆಗಾಗಿ 90 ಮಿಲಿಯ ಒರಿಜಿನಲ್ ಚಾಯ್ಸ್ ವಿಸ್ಕಿಯಿಂದ 9 ಟೆಟ್ರಾ ಪ್ಯಾಕೆಟಗಳು ಹೈವಾಟ್ಸ ವಿಸ್ಕಿಯಿಂದ 17 ಟೆಟ್ರಾ ಪ್ಯಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಚೀಲದಲ್ಲಿ ಕಟ್ಟಿ ಇಲಾಖಾ ಸೀಲಿನಿಂದ ಸೀಲ್ ಮಾಡಿ ಮಾದರಿ ಸೀಲಿನ ನಮೂನೆ ಅಂಟಿಸಿರುತ್ತೇವೆ. ನಂತರ ಆರೋಪಿತನಿಗೆ ನೋಟೀಸ ನೀಡಿ ಮುದ್ದೆ ಮಾಲುಗಳೊಂದಿಗೆ ಕಚೇರಿಗೆ ಬಂದು ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಮೊಬೈಲ್ ವೀವೊ ವಿ27 ನಲ್ಲಿ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ನಂತರ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಶೋಧನಾ ಸಮುಚಿತ ಆಧಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1, ಪಂಚನಾಮೆಯನ್ನು ನಿಪಿ.2 ಎಂದು, ಮುಟ್ಟುಗೋಲುಯಾದಿ ನಿಪಿ.3, ಮಾದರಿ ಸೀಲು ನಮೂನೆ ನಿಪಿ.4, ಪಂಚನಾಮೆ ಕಾಲಕ್ಕೆ ತೆಗೆದ ಪೋಟೋ ನಿಪಿ.5, ಸಿಡಿ ನಿಪಿ.6, ದೂರು ನಿಪಿ.7, ಪ್ರ.ವ.ವರದಿಯನ್ನು ನಿಪಿ.8 ಎಂದು ಗುರುತಿಸಲಾಯಿತು. ಮುದ್ದೆ ಮಾಲುಗಳನ್ನು 1 ರಿಂದ 27 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಾಗೂ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆಃ 3 ಫ್ರಾಸಾ.2 ಅರುಣ್ ಕುಮಾರ್ ಕೆ.ಎಂ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 31.05.2025 ರಂದು ತಮ್ಮ ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಹರಿಹರ ನಗರದ ಜೈಭೀಮ್ ನಗರದಲ್ಲಿ ಗಸ್ತು ಕಾರ್ಯ ಮಾಡುತ್ತಿರುವಾಗ ಅಬಕಾರಿ ಉಪ ನಿರೀಕ್ಷಕರು ಚಾಸಾ.1 ರವರಿಗೆ ಬಂದ ಮಾಹಿತಿ ಮೇರೆಗೆ ಜೈಭೀಮ್ ನಗರದ ನೀಲಪ್ಪ ಹರಳಿಕಟ್ಟೆ ಎಂಬುವರಿಗೆ ಸೇರಿದ ಮನೆಗೆ ಹೊಂದಿಕೊಂಡು ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಅಲ್ಲಿಗೆ ಹೋಗಬೇಕಾಗಿ ಅಧಿಕಾರಿಗಳು ತಿಳಿಸಿರುತ್ತಾರೆ. ನಂತರ ನೀಲಪ್ಪ ಹರಳಿಕಟ್ಟೆರವರ ಕಿರಾಣಿ ಅಂಗಡಿಗೆ ಹೋಗಿ ಅಲ್ಲಿದ್ದ ಸ್ಥಳೀಯರನ್ನು ಪಂಚರಾಗಿ ಕೋರಲಾಗಿ ಅವರು ಒಪ್ಪದೇ ಇರುವ ಕಾರಣ ಅಧಿಕಾರಿಗಳು ಇಲಾಖಾ ಸಿಬ್ಬಂದಿಗಳಾದ ತಾನು, ಮತ್ತು ಚಾಸಾ.2 ರವರನ್ನು ಸ್ಥಳದಲ್ಲಿಯೇ ಶೋಧನಾ ವಾರಂಟ್ ತಯಾರಿಸಿ ನಮ್ಮ ಸಹಿ ಪಡೆದಿರುತ್ತಾರೆ. ನಂತರ ಮನೆಯನ್ನು ಪ್ರವೇಶಿಸಿದಾಗ ಅಂಗಡಿ ದಕ್ಷಿಣಾಭಿಮುಖವಾಗಿದ್ದು, ಬಲಗಡೆಯ ಗಲ್ಲಾಪೆಟ್ಟಿಗೆ ಕೆಳಗೆ ಸ್ಟಾರ್ ಪಾನ್ ಮಸಾಲಾ ಚೀಲ ಇರುವುದು ಕಂಡು ಬಂದಿತ್ತು. ನಂತರ ಅದನ್ನು ಶೋಧನೆ ಮಾಡಲಾಗಿ ಅದರಲ್ಲಿ ಮದ್ಯದ ಹೈ ವಾಟ್ಸ ಚಿಯರ್ಸ ವಿಸ್ಕಿಯ 25 ಟೆಟ್ರಾ ಪ್ಯಾಕೆಟಗಳು, ಒಸಿ ವಿಸ್ಕಿಯ 25 ಟೆಟ್ರಾ ಪ್ಯಾಕೆಟ್ ಗಳು, ಒಟ್ಟು 50 ಟೆಟ್ರಾ ಪ್ಯಾಕೆಟ್‌ಗಳು ಇದ್ದವು. ಅವುಗಳ ಮೇಲಿರುವ ಭದ್ರತಾ ಸಂಖ್ಯೆಗಳನ್ನು ಕಿತ್ತು ಹಾಕಲಾಗಿತ್ತು. ನಂತರ ಆ ವ್ಯಕ್ತಿಯನ್ನು ಕರೆದ ಹೆಸರು ಕೇಳಲಾಗಿ ನೀಲಪ್ಪ ಹರಳಿಕಟ್ಟೆ ಎಂದು

ಉತ್ತರಿಸಿದ್ದು, ದೊರೆತ ಮುದ್ದೆ ಮಾಲುಗಳಿಂದ ಹೈ ವಾಟ್ಸ ಚಿಯರ್ಸ ವಿಸ್ಕಿಯಿಂದ 17 ಟೆಟ್ರಾ ಪ್ಯಾಕೆಟ್, ಒಸಿ ವಿಸ್ಕಿಯಿಂದ 9 ಟೆಟ್ರಾ ಪ್ಯಾಕೆಟಗಳನ್ನು ಒಟ್ಟು 26 ಟೆಟ್ರಾ ಪ್ಯಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಸೀಲ್ ಮಾಡಿ ಪಂಚನಾಮೆಯನ್ನು 6.15 ರಿಂದ 6.45 ರವರೆಗೆ ಜರುಗಿಸಿ ಚಾಸಾ.1 ರವರು ಚಾಸಾ.1 ರವರು ಮು.ಮಾ. ಹಾಗೂ ಆರೋಪಿತರೊಂದಿಗೆ ಕಚೇರಿಗೆ ಬಂದು ದೂರನ್ನು ಕೊಟ್ಟಿರುತ್ತಾರೆ. ತಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತಾರೆ. ಸಾಕ್ಷಿಯು ನಿಪಿ.1 ರಿಂದ 4 ರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.1 ಬಿ ರಿಂದ 4 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.5 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಹಾಗೂ ಮು.ಮಾ.ಗಳನ್ನು ನೋಡಿ ಗುರುತಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 4 ಫ್ರಾಸಾ.3 ದೇವಸಿಂಗ್ಯಾನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 04.06.2025 ರಂದು ಚಾಸಾ. 1 ರವರ ಮೂಲಕ ಕಡತಗಳನ್ನು ಪಡೆದುಕೊಂಡು ಪರಿಶೀಲಿಸಿ, ಅದೇ ದಿನ ಚಾಸಾ.2, 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿ:11.07.2025 ರಂದು ಗುನ್ನಾ ಸ್ಥಳದ ಬಗ್ಗೆ ನಗರಸಭೆಯವರಿಗೆ ಮಾಹಿತಿ ಕೋರಿ ಪತ್ರ ಬರೆದಿರುತ್ತೇನೆ. ದಿ:15.07.2025 ರಂದು ಗುನ್ನಾ ಸ್ಥಳದ ಪರಿಶೀಲನೆ ಮಾಡಿರುತ್ತೇನೆ. ಅದೇ ದಿನ ರಾಸಾಯನಿಕ ಪರೀಕ್ಷೆಗಾಗಿ ಚಾಸಾ.4 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ.4 ರವರ ಹೇಳಿಕೆ ಪಡೆದಿರುತ್ತೇನೆ. ದಿ:16.07.2025 ರಂದು ಆರೋಪಿತನ ಹೇಳಿಕೆ ಪಡೆದಿರುತ್ತೇನೆ. ದಿ:08.08.2025 ರಂದು ನಗರಸಭೆಯಿಂದ ವರದಿ ಪಡೆದಿರುತ್ತೇನೆ. ನಂತರ ರಾಸಾಯನಿಕ ವರದಿ ಪಡೆದುಕೊಂಡು ಆರೋಪಿತರ ವಿರುದ್ಧ ಸಾಕಷ್ಟು ಸಾದಾರಗಳು ಕಂಡು ಬಂದಿದ್ದರಿಂದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಗುನ್ನೆ ನಡೆದ ಪರಿಶೀಲನಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.6 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6 ಎ ಎಂದು, ರಾಸಾಯನಿಕ ಪರೀಕ್ಷಾ ಕೇಂದ್ರ, ಚಿತ್ರದುರ್ಗ ರವರಿಗೆ ಬರೆದ ಪತ್ರವನ್ನು ನಿಪಿ.7, ಸಾಕ್ಷಿಯ ಸಹಿಯನ್ನು ನಿಪಿ.7 ಎ ಎಂದು, ವರದಿ ನಿಪಿ.8, ಸಾಕ್ಷಿಯ ಸಹಿಯನ್ನು ನಿಪಿ.8 ಎ ಎಂದು, ಆರೋಪಿತರ ಸ್ವಖುಷಿ ಹೇಳಿಕೆ ನಿಪಿ.9, ಸಾಕ್ಷಿಯ ಸಹಿಯನ್ನು ನಿಪಿ.9 ಎ ಎಂದು, ನಗರಸಭೆಯವರಿಗೆ ಬರೆದ ಪತ್ರ ನಿಪಿ.10 ಸಾಕ್ಷಿಯ ಸಹಿಯನ್ನು ನಿಪಿ.10 ಎ ಎಂದು, ಆಸ್ತಿ ತೆರಿಗೆ ಬೇಡಿಕೆ ಪತ್ರ ನಿಪಿ. 11 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಹಾಗೂ ಮುದ್ದೆ ಮಾಲಗಳನ್ನು ನೋಡಿ ಗುರುತಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 5 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ

ಪ್ರಶ್ನೆಃ 6 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?
ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 13.06.2026 ಪ್ರಧಾನ ಸಿವಿಲ್ ನ್ಯಾಯಾಧೀಶರು
ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ.